ಓ.ಎಸ್ಃ 364-2008

ಡಿ. ಡಬ್ಲ್ಯೂ ಃ 06

**<u>ಸಾಕ್ಷಿಗೆ ದಿನಾಂಕ 20.12.2021 ರಂದು ಪ್ರಮಾಣ ವಚನ ನೀಡಲಾಯಿತು.</u>**

**<u>ಪಾಟೀಸವಾಲುಃ ವಾದಿ ಪರ ವಕೀಲರಿಂದ</u>**

ನಾನು 1989 ರಿಂದ ಕೆಮಿಕಲ್ ಇಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದೆನು. ಈಗ ನಾನು ಖಾಸಗಿ ಕಂಪನಿಯಲ್ಲಿ ಉದ್ಯೋಗ ಮಾಡುತ್ತಿದ್ದೇನೆ. ನಾನು 1 ರಿಂದ 7 ನೇ ಪ್ರತಿವಾದಿಗಳ ಕುಟುಂಬದ ವಂಶವೃಕ್ಷವನ್ನು ಪಡೆದುಕೊಂಡಿರುತ್ತೇನೆ. ನಾನು ಕ್ರಯಕ್ಕೆ ಪಡೆದುಕೊಳ್ಳುವಾಗ ನಿಂಗೇಗೌಡರಿಗೆ ಎಷ್ಟು ಜನ ಹೆಣ್ಣು ಮಕ್ಕಳಿದ್ದಾರೆ ಎಂದು ನಾನು ಕೇಳಿರುತ್ತೇನೆ, ನನಗೆ ಸದರಿ ರವರು ಯಾವುದೇ ಮಾಹಿತಿಯನ್ನು ನೀಡಿರುವುದಿಲ್ಲ. ನಾನು ಕ್ರಯಕ್ಕೆ ಪಡೆದುಕೊಳ್ಳುವಾಗ ಮಹದೇವ ಹಾಗೂ ಜವರೇಗೌಡ ಉಃ ಸಪ್ಪೇಗೌಡರ ನಡುವೆ ಆದ ವಿಭಾಗ ಪತ್ರವನ್ನು ನೋಡಿರುತ್ತೇನೆ. ನಾನು ಕ್ರಯಕ್ಕೆ ಪಡೆದುಕೊಳ್ಳುವಾಗ ಸದರಿ ರವರಿಂದ ಸದರಿ ವಿಭಾಗ ಪತ್ರವನ್ನು ಪಡೆದುಕೊಂಡಿಲ್ಲ. ಯಾವ ದಿನಾಂಕದಂದು ವಿಭಾಗವಾಗಿದೆ ಎಂದು ನನಗೆ ಗೊತ್ತಿಲ್ಲ. ಜವರೇಗೌಡ ಉಃ ಸಪ್ಪೇಗೌಡರವರ ಕುಟುಂಬದ ವಂಶವೃಕ್ಷವನ್ನು ನನಗೆ ಅವರ ಇಬ್ಬರು ಗಂಡು ಮಕ್ಕಳು ನೀಡಿರುತ್ತಾರೆ, ಅವರ ಹೆಸರು ನನಗೆ ಗೊತ್ತಿಲ್ಲ. ಅವರ ಇಬ್ಬರು ಗಂಡು ಮಕ್ಕಳು ನನಗೆ ಅವರ ಕುಟುಂಬದ ಎಲ್ಲಾ ಸದಸ್ಯರನ್ನೊಳಗೊಂಡ ವಂಶವೃಕ್ಷವನ್ನು ನನಗೆ ಕೊಟ್ಟಿರಲಿಲ್ಲ. ವಂಶವೃಕ್ಷದ ದಾಖಲೆಯನ್ನು ನಾನು ನ್ಯಾ.ಕ್ಕೆ ಹಾಜರುಪಡಿಸಿರುತ್ತೇನೆ.

ನಾನು ಕ್ರಯಕ್ಕೆ ಪಡೆದುಕೊಳ್ಳುವ ಪೂರ್ವದಲ್ಲಿ ವಂಶವೃಕ್ಷದ ಪ್ರಕಾರ ಕುಟುಂಬದ ಎಲ್ಲಾ ಸದಸ್ಯರು ಇದ್ದಾರೋ ಇಲ್ಲವೋ ಎಂದು ಗ್ರಾಮದಲ್ಲಿ ವಿಚಾರಿಸಲಿಲ್ಲ. ನಾನು ಸ್ವತ್ತನ್ನು ಕ್ರಯಕ್ಕೆ ಪಡೆದುಕೊಳ್ಳುವ ಸಮಯದಲ್ಲಿ 1 ರಿಂದ 7 ನೇ

ಪ್ರತಿವಾದಿ ರವರು ಜವರೇಗೌಡ ಉಃ ಸಪ್ಪೇಗೌಡ ಹಾಗೂ ಅಪ್ರಾಪ್ತ ಹಾಗೂ ಪ್ರಾಪ್ತ ವಯಸ್ಸಿನ ಮೊಮ್ಮಕ್ಕಳ ಪರವಾಗಿ ನೈಸರ್ಗಿಕ ಪಾಲಕರು ನಮಗೆ ರೀಲೀಸ್ ಡೀಡ್ ಬರೆದುಕೊಟ್ಟಿರುತ್ತಾರೆ ಎಂದು ಹೇಳಿದ್ದು ಅವರಲ್ಲಿ ಯಾರು ಪ್ರಾಪ್ತರು ಹಾಗೂ ಅಪ್ರಾಪ್ತರು ಎಂದು ನಾನು ವಿಚಾರಣೆ ಮಾಡಿರುತ್ತೇನೆ. ಎಷ್ಟು ಜನ ಪ್ರಾಪ್ತರು ಹಾಗೂ ಎಷ್ಟು ಜನ ಅಪ್ರಾಪ್ತ ಜನ ಇದ್ದರು ಎಂದು ನನಗೆ ಈಗ ನೆನಪಿಲ್ಲ. ನಾನು ಕ್ರಯದ ಮೊಬಲಗನ್ನು ನಗದು ರೂಪದಲ್ಲಿ ನೀಡಿರುತ್ತೇನೆ, ನನಗೆ ನೋಟೀನ ಮುಖಬೆಲೆ ಈಗ ನೆನಪಿಲ್ಲ. ಜವರೇಗೌಡ ಉಃ ಸಪ್ಪೇಗೌಡ ರವರು ತಮ್ಮ ಕುಟುಂಬದ ನಿರ್ವಹಣೆಯ ಅವಶ್ಯಕತೆಗಾಗಿ ಹಾಗೂ ವಿಭಾಗ ಮಾಡಿಕೊಳ್ಳಲು ನನಗೆ ಸ್ವತ್ತನ್ನು ಮಾರಾಟ ಮಾಡಿರುತ್ತಾರೆ. ಸಾಕ್ಷಿಯು ಮುಂದುವರೆದು ತಮ್ಮ ಮೊಮ್ಮಕ್ಕಳ ವಿದ್ಯಾಭ್ಯಾಸದ ಖರ್ಚಿಗಾಗಿ ನನಗೆ ಸ್ವತ್ತನ್ನು ಮಾರಾಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಯಾವ ಉದ್ದೇಶಕ್ಕಾಗಿ ಸ್ವತ್ತನ್ನು ನನಗೆ ಮಾರಾಟ ಮಾಡುತ್ತಿದ್ದಾರೆ ಎಂದು ನನ್ನ ಕ್ರಯದಾರರನ್ನು ಖುದ್ದು ವಿಚಾರಣೆ ಮಾಡಿಲ್ಲ.

ನಾನು ಕ್ರಯಕ್ಕೆ ಪಡೆದುಕೊಂಡ ಸ್ವತ್ತಿನಲ್ಲಿ ಎಷ್ಟು ಜನ ಹಕ್ಕುದಾರರಿದ್ದಾರೆ ಎಂದು ನನ್ನ ಕ್ರಯದಾರರನ್ನು ಕೇಳಿರುತ್ತೇನೆ ಆಗ ಅವರು ನನಗೆ ವಂಶವೃಕ್ಷವನ್ನು ನೀಡಿರುತ್ತಾರೆ. ದಾವೆಯನ್ನು ಸಲ್ಲಿಸುವ ಪೂರ್ವದಲ್ಲಿ ವಾದಿ ನನಗೆ ಹಾಗೂ ನನ್ನ ಹೆಂಡತಿಗೆ ನೋಟೀಸನ್ನು ನೀಡಿದ್ದರು ಎಂದರೆ ಸಾಕ್ಷಿಯು ನಾನು ಊರಿನಲ್ಲಿ ಇರಲಿಲ್ಲ ಹಾಗಾಗಿ ನೀಡಿದ್ದರೋ ಇಲ್ಲವೋ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ವಾದಿ ನೀಡಿದ ನೋಟೀಸಿಗೆ ನಾನು ನಿಪಿ 47 ರ ಪ್ರಕಾರ ಪ್ರತ್ಯುತ್ತರ ನೀಡಿರುತ್ತೇನೆ ಎಂದರೆ ಸರಿ. ವಾದಿಯಿಂದ ನೋಟೀಸ್ ಪಡೆದುಕೊಂಡ ನಂತರ 1 ರಿಂದ 7 ನೇ ಪ್ರತಿವಾದಿಗಳು ನನಗೆ ಸುಳ್ಳು ವಂಶವೃಕ್ಷವನ್ನು ನೀಡಿ ಸ್ವತ್ತನ್ನು ಮಾರಾಟ ಮಾಡಿರುತ್ತಾರೆ ಎಂದು ಅವರ

ವಿರುದ್ಧ ಯಾವುದೇ ಪ್ರಕರಣ ದಾಖಲಿಸಲಿಲ್ಲ. ಸಾಕ್ಷಿಯು ಮುಂದುವರೆದು 1 ರಿಂದ 7 ನೇ ಪ್ರತಿವಾದಿಗಳನ್ನು ಭೇಟಿ ಮಾಡಿದಾಗ ಅವರು ಇದು ನಮ್ಮ ಕುಟುಂಬಕ್ಕೆ ಸಂಬಂಧಿಸಿದ್ದು ಅದನ್ನು ನಾವು ನೋಡಿಕೊಳ್ಳುತ್ತೇವೆ ಎಂದು ಹೇಳಿದ್ದರಿಂದ ನಾನು ಅವರ ವಿರುದ್ಧ ಯಾವುದೇ ಪ್ರಕರಣ ದಾಖಲಿಸಲಿಲ್ಲ. ನಂತರ 1 ರಿಂದ 7 ನೇ ಪ್ರತಿವಾದಿಗಳು ನನಗೆ ನಮ್ಮ ಕುಟುಂಬದ ಕೆಲವೊಂದು ನಿವೇಶನಗಳನ್ನು ನಾವು ಉಳಿದ ಸದಸ್ಯರಿಗೆ ನೀಡುತ್ತಿದ್ದೇವೆ ಹಾಗಾಗಿ ಯಾವುದೇ ತಂಟೆ-ತಕರಾರುಗಳು ಬಂದರೆ ನಾವು ಬಗೆಹರಿಸಿಕೊಳ್ಳುತ್ತೇವೆ ಎಂದು ನನಗೆ ಹೇಳಿದ್ದರು ಎಂದು ನುಡಿಯುತ್ತಾರೆ. ಈ ವಿಚಾರವಾಗಿ 1 ರಿಂದ 7 ನೇ ಪ್ರತಿವಾದಿಗಳು ನನಗೆ ಯಾವುದೇ ದಾಖಲೆಗಳನ್ನು ಬರೆದುಕೊಟ್ಟಿಲ್ಲ.

1 ರಿಂದ 7ನೇ ಪ್ರತಿವಾದಿಗಳ ಕುಟುಂಬಲ್ಲಿ ನಿವೇಶನಗಳನ್ನು ನೀಡಿ ಸಮಸ್ಯೆಯನ್ನು ಬಗೆಹರಿಸಿಕೊಂಡಿರುತ್ತಾರೋ ಇಲ್ಲವೋ ನನಗೆ ಗೊತ್ತಿಲ್ಲ. ನಾನು ಕ್ರಯಕ್ಕೆ ಪಡೆದುಕೊಂಡಿರುವ ಸ್ವತ್ತಿನಲ್ಲಿ ವಾದಿಗೂ ಸಹಾ ಹಕ್ಕಿದೆ ಎಂದರೆ ಸರಿಯಲ್ಲ. ನಾನು ಸ್ವತ್ತನ್ನು ಕ್ರಯಕ್ಕೆ ಪಡೆದುಕೊಳ್ಳುವ ಸಮಯದಲ್ಲಿ 1 ರಿಂದ 7 ನೇ ಪ್ರತಿವಾದಿಗಳ ಕುಟುಂಬದ ಬಗೆಗ ಸರಿಯಾಗಿ ಪರಿಶೀಲಿಸದೆ ಯಾವುದೇ ವಿಚಾರಣೆ ಮಾಡದೆ 1 ರಿಂದ 7 ನೇ ಪ್ರತಿವಾದಿಗಳೊಂದಿಗೆ ಸೇರಿಕೊಂಡು ವಾದಿಗೆ ಯಾವುದೇ ಹಕ್ಕನ್ನು ನೀಡಬಾರದು ಎಂಬ ಉದ್ದೇಶದಿಂದ ಸ್ವತ್ತನ್ನು ಕ್ರಯಕ್ಕೆ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಸ್ವತ್ತನ್ನು ಖರೀದಿಸುವಾಗ ಸರಿಯಾಗಿ ವಿಚಾರಣೆ ಮಾಡದೆ ಇದ್ದಿದ್ದರಿಂದ ನಾನು ಸದ್ಭಾವನ ಖರೀದಿದಾರನಲ್ಲ ಎಂದರೆ ಸರಿಯಲ್ಲ. ವಾದಿಗೂ ಸಹಾ ದಾವ ಷೆಡ್ಯೂಲ್ ಸ್ವತ್ತುಗಳನ್ನು ಹಕ್ಕು ಇದೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ
ಶ್ರೀರಂಗಪಟ್ಟಣ